# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೀದರ ಪೀಠ ಬಸವಕಲ್ಯಾಣ

## SC. No.5018/2023
## SC. No.5043/2023

| | | |
|---|---|---|
| ಹೆಸರು | : | ಅಂಬಿಕಾ |
| ಗಂಡನ ಹೆಸರು | : | ಮಹಾದೇವ |
| ವಯಸ್ಸು | : | 38 ವರ್ಷ. |
| ಉದ್ಯೋಗ | : | ಟೈಲರಿಂಗ್ |
| ವಾಸಸ್ಥಳ | : | ಕೋಹಿನೂರ |

**ಚಾ.ಸಾ.12**
**ಅ.ಸಾ. 09**

ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರವರಿಂದಃ-**

ನನಗೆ ಆರೋಪಿತರ ಪರಿಚಯವಿದೆ. ನನಗೆ ಚಾ.ಸಾ. 1, 7 ರಿಂದ 10 ರವರ ಪರಿಚಯವಿಲ್ಲಾ. ನನಗೆ ಚಾ.ಸಾ. 11, 13 ಮತ್ತು 14 ರವರ ಪರಿಚಯವಿದೆ. ನನಗೆ ಮೃತ ಸಂಜನಾ ಈಕೆಯ ಪರಿಚಯವಿರಲಿಲ್ಲಾ. ನನಗೆ ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲಾ. ಸಂಜನಾ ಇವಳು ತನ್ನ ಜೀವನಾವಧಿಯಲ್ಲಿ ನನಗೆ ಎಂದಿಗೂ ಭೇಟಿಯಾಗಿಲ್ಲಾ, ನನಗೆ ಯಾವ ವಿಷಯವೂ ತಿಳಿಸಿರುವುದಿಲ್ಲಾ. ಆಕೆ ಯಾವ ಕಾರಣಕ್ಕೆ ಮೃತಪಟ್ಟಿರುತ್ತಾಳೆ ಎಂದು ನನಗೆ ಗೊತ್ತಿಲ್ಲಾ. ನಾನು ಯಾರ ಮುಂದೆಯೂ ಯಾವುದೇ ಹೇಳಿಕೆ ನೀಡಿರುವುದಿಲ್ಲಾ.

***(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ***

***ಆದಕಾರಣ ಅನುಮತಿ ನೀಡಲಾಯಿತು)***

## ಪಾಟಿ ಸವಾಲು - ಸರಕಾರಿ ಅಭಿಯೋಜಕರವರಿಂದಃ-

2022 ಕ್ಕಿಂತ ಮುಂಚೆ 3 ನೇ ಆರೋಪಿತನು ಮೃತ ಸಂಜನಾ ಈಕೆಯನ್ನು ಪ್ರೀತಿಸುತ್ತಿದ್ದನು, ಅವರಿಬ್ಬರ ಪ್ರೀತಿ ಮಾಡುವುದು 1 ಮತ್ತು 2 ನೇ ಆರೋಪಿತರಿಗೆ ಒಪ್ಪಿಗೆ ಇರಲಿಲ್ಲಾ, ನಂತರ ದಿ: 31.07.2021 ರಂದು ಮೃತ ಸಂಜನಾ ಈಕೆ 3 ನೇ ಆರೋಪಿತನೊಂದಿಗೆ ಮದುವೆ ಮಾಡಿಕೊಂಡು ಸದರಿ ಮದುವೆ ಬಗ್ಗೆ ನೊಂದಣಿ ಮಾಡಿಸಿದ್ದು ಈ ಕುರಿತು 1 ಮತ್ತು 2 ನೇ ಆರೋಪಿತರು ಅಸುಹೆಪಟ್ಟು ಮನೆಯಲ್ಲಿ ಮೃತಳೊಂದಿಗೆ ಜಗಳ ಮಾಡಿ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದರು, 1 ಮತ್ತು 2 ನೇ ಆರೋಪಿತರ ಮಾತು ಕೇಳಿ 3 ನೇ ಆರೋಪಿತನು ಸಹ ಮೃತಳಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದನು, ಮೂರು ಜನ ಆರೋಪಿತರು ಮೃತಳಿಗೆ ನೀನು ಓಡಿ ಬಂದು ಮದುವೆಯಾಗಿದ್ದಿ, ನಿನಗೆ ನಮ್ಮ ಮನೆಯಲ್ಲಿ ಜಾಗವಿಲ್ಲಾ ಅಂತಾ ಜಗಳ ಮಾಡುತ್ತಿದ್ದರು, ಸದರಿ ವಿಷಯವನ್ನು ಮೃತಳು ನನಗೆ ತಿಳಿಸಿದಾಗ ನಾನು ಆಕೆಗೆ ಸಮಾಧಾನ ಹೇಳಿರುತ್ತೇನೆ ಅಂತಾ ಅನ್ನುವುದು ಸರಿ ಅಲ್ಲಾ.

ನಂತರ ದಿ: 31.12.2022 ರಂದು ಸಂಜೆ 6:00 ಗಂಟೆಗೆ ನಮ್ಮ ಓಣಿಯ ಜನರಿಂದ ಗೊತ್ತಿಗಿದ್ದೇನೆಂದರೆ ಮೃತ ಸಂಜನಾ ಆಕೆಯ ಅಜ್ಜಿಯಾದ ಸುಭದ್ರಾಬಾಯಿ ಮೃತಪಟ್ಟಿದ್ದರಿಂದ ಅಂತ್ಯ ಸಂಸ್ಕಾರ ಕುರಿತು ಹೋಗಿ ಮರಳಿ ಕೋಹಿನೂರ ಗ್ರಾಮಕ್ಕೆ ಸಂಜೆ 5:30 ಗಂಟೆಗೆ ಬಂದಾಗ ಆರೋಪಿತರೆಲ್ಲರೂ ಸೇರಿ ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ಏ ರಂಡಿ ನೀನು ಯಾರಿಗೆ ಕೇಳಿ ನಿಮ್ಮ ಅಜ್ಜಿಯ ಅಂತ್ಯಕ್ರಿಯಕ್ಕೆ ಹೋಗಿದ್ದಿ ಅಂತಾ ಬೈಯ್ದು ಆಕೆಯೊಂದಿಗೆ ಝಿಂಜಾ ಮುಷ್ಠಿ

ಮಾಡಿ ರಂಡಿ ನೀನು ಎಲ್ಲಾದರೂ ಹೋಗಿ ಸಾಯಿ ಅಂತಾ ಬೈಯುತ್ತಿದ್ದಾಗ 2 ನೇ ಆರೋಪಿ ಇವಳಿಗೆ ಒಂದು ಗತಿ ಕಾಣಿಸೋಣ ಅಂತಾ ಹೇಳಿ ಮೂರು ಜನ ಆರೋಪಿತರು ಕೂಡಿಕೊಂಡು ಮನೆಯಲ್ಲಿದ್ದ ಸ್ಯಾನಿಟೈಜರ್ ಬಾಟಲ್ ತೆಗೆದುಕೊಂಡು ಸಂಜನಾಳ ಮೈ ಮೇಲೆ ಸುರಿದು ಬೆಂಕಿ ಹಚ್ಚಿರುತ್ತಾರೆ ಅಂತಾ ತಿಳಿದು ಬಂತು ಅಂತಾ ಅನ್ನುವುದು ಸರಿ ಅಲ್ಲಾ. ನಂತರ ದಿ: 19.12.2022 ರಂದು ಬೆಳಗಿನ ಜಾವ 2:00 ಗಂಟೆಗೆ ಕಲಬುರಗಿಯ ಬಸವೇಶ್ವ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಂಜನಾ ಮೃತಪಟ್ಟಿರುತ್ತಾಳೆ ಅಂತಾ ಗೊತ್ತಾಯಿತು ಅಂತಾ ಅನ್ನುವುದು ಸರಿ ಅಲ್ಲಾ. ಈಗ ಓದಿ ಹೇಳಿದಂತೆ ನಾನು ಚಾ.ಸಾ. 22 ರವರ ಮುಂದೆ ಹೇಳಿಕೆ ನೀಡಿರುತ್ತೇನೆ ಅಂತಾ ಅನ್ನುವುದು ಸರಿ ಅಲ್ಲಾ. ಸಾಕ್ಷಿಯ ಹೇಳಿಕೆಯನ್ನು ನಿಶಾನೆ ಪಿ. 9 ಅಂತಾ ಗುರುತಿಸಲಾಯಿತು.

ನಾನು ನಿಶಾನೆ ಪಿ. 9 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಇಲ್ಲಾ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ :-**

ಪಾಟೀ ಸವಾಲು ಇಲ್ಲಾ.

***(ತೆರೆದ ನ್ಯಾಯಾಲಯಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)***

ಓ. ಹೇ. ಕೇ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಸವಕಲ್ಯಾಣ. ಜಿಃ ಬೀದರ .